# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯೂಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

## ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

## Assessment - March 2024 Model Paper

**ತರಗತಿ : 5** | **ವಿಷಯ : ಪ್ರಥಮ ಭಾಷೆ ಕನ್ನಡ** | **ಅಂಕಗಳು : 40** | **ಸಮಯ : 2 ಗಂಟೆ**

**ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ**

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

**ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ**

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ______________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

**ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ**

| ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು | ಪ್ರಶ್ನೆ ಸಂಖ್ಯೆ | ಪಡೆದ ಅಂಕಗಳು |
|---|---|---|---|---|---|
| 1 | | 11 | | 21 | |
| 2 | | 12 | | 22 | |
| 3 | | 13 | | 23 | |
| 4 | | 14 | | 24 | |
| 5 | | 15 | | – | |
| 6 | | 16 | | – | |
| 7 | | 17 | | – | |
| 8 | | 18 | | – | |
| 9 | | 19 | | – | |
| 10 | | 20 | | – | |
| ಒಟ್ಟು ಅಂಕಗಳು | | ಒಟ್ಟು ಅಂಕಗಳು | | ಒಟ್ಟು ಅಂಕಗಳು | |
| | | | | ಒಟ್ಟು ಗಳಿಸಿದ ಅಂಕ | |

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ______________________

ಮೌಲ್ಯಮಾಪಕರ ಸಹಿ : ____________

**I** **1 ರಿಂದ 10 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿ ಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **10x1=10**

**1.** **ಹಿರಿಯರನ್ನು ಗೌರವದಿಂದ ಕಾಣಬೇಕು.**

**ಅಡಿಗೆರೆ ಎಳೆದ ಪದವು ಸೂಚಿಸುವ ವಿಭಕ್ತಿ ಪ್ರತ್ಯಯ,**

A) ಉ B) ಅನ್ನು

C) ಅ D) ಅಲ್ಲಿ

ಉತ್ತರ : ☐ ____________________

**2.** **ಈ ಹಣ್ಣಿನ ಅದ್ಭುತ ರುಚಿಯು ಆಪೂಸ್ ಮಾವಿನ ಹಣ್ಣಿನ ರುಚಿಗಿಂತ ಮೇಲು**

**ಈ ವಾಕ್ಯದ ಕೊನೆಯಲ್ಲಿ ಬಳಸಬಹುದಾದ ಸೂಕ್ತ ಲೇಖನ ಚಿಹ್ನೆ,**

A) ? B) “ ”

C) ! D) ;

ಉತ್ತರ : ☐ ____________________

**3.** **ಗುರುಗಳ ಆಶೀರ್ವಾದದಿಂದ ನಾನು ಸುಶಿಕ್ಷಿತನಾದೆ.**

**ಈ ವಾಕ್ಯದಲ್ಲಿ ಆಶೀರ್ವಾದ ಪದ ಸೂಚಿಸುವ ಅರ್ಥ,**

A) ಆರೈಕೆ B) ಹಾರೈಕೆ

C) ದನ್ಯತೆ D) ಆದರಣೆ

ಉತ್ತರ : ☐ ________________________________

**4.** **ತಪ್ಪು ಮಾಡಿದವರನ್ನು ದಂಡದಿಂದ ಶಿಕ್ಷಿಸಿ ದಂಡ ಹಾಕುವುದು ಸಂಪ್ರದಾಯವಾಗಿತ್ತು.**

**ವಾಕ್ಯದಲ್ಲಿ ದಂಡ ಪದವು ಸೂಚಿಸಿದ ನಾನಾರ್ಥಗಳು,**

A) ಕೋಲು, ಶಿಕ್ಷೆ B) ಕೋಲು, ಕಡ್ಡಿ

C) ದಂಡ, ನಾಯಕ D) ಶಿಕ್ಷೆ, ರಕ್ಷೆ

ಉತ್ತರ : ☐ ____________________

5. **ರಾಯಣ್ಣನ ಸಹಚರರು ಗೆರಿಲ್ಲಾ ಯುದ್ಧತಂತ್ರವನ್ನು ಅಭ್ಯಾಸ ಮಾಡಿದ್ದರು.**

**ಅಡಿಗೆರೆ ಎಳೆದ ಪದದ ವಿರುದ್ಧಾರ್ಥಕ ಪದ,**

A) ದುರಭ್ಯಾಸ B) ನಿರಭ್ಯಾಸ

C) ಸದಭ್ಯಾಸ D) ಅನಭ್ಯಾಸ

ಉತ್ತರ : ☐ ____________________

6. **ಚನ್ನಮ್ಮ ಬ್ರಿಟಿಷರ ವಿರುದ್ಧ ಕೋಪಗೊಂಡು ಯುದ್ಧ ಸಾರಿದಳು.**

**ಇಲ್ಲಿ 'ಕೋಪಗೊಂಡು' ಎಂಬುದು ಇದಕ್ಕೆ ಉದಾಹರಣೆ,**

A) ಲೋಪ ಸಂಧಿ B) ಆದೇಶ ಸಂಧಿ

C) ಆಗಮ ಸಂಧಿ D) ಗುಣ ಸಂಧಿ

ಉತ್ತರ : ☐ ____________________

7. **ಮುಳ್ಳನ್ನು ತುಳಿದ ಮಗು ಅಕ್ಕಾ ಎಲ್ಲಿರುವೆ ಎಂದು ಕೋಪಗೊಂಡು ಮೇಲೇರುತ್ತಾ ಬಂದಿತು.**

**ಅಡಿಗೆರೆ ಎಳೆದ ಪದವು,**

A) ಸಂಧಿಕಾರ್ಯದ ಪದ B) ಪ್ರಕೃತಿಭಾವ ಪದ

C) ಅವ್ಯಯ ಪದ D) ಧಾತು ಪದ

ಉತ್ತರ : ☐ ____________________

8. **ವೇದಮೂರ್ತಿಯು ನದಿಯಲ್ಲಿ ಈಜಿ ಮಗುವನ್ನು ರಕ್ಷಿಸಿದನು.**

**ಈ ವಾಕ್ಯದಲ್ಲಿರುವ ಕ್ರಿಯಾಪದ,**

A) ವೇದಮೂರ್ತಿ B) ನದಿಯಲ್ಲಿ

C) ಈಜಿ D) ಮಗುವನ್ನು

ಉತ್ತರ : ☐ ____________________

9. **ನಮ್ಮ ಊರಿನಲ್ಲಿ ಜಾತ್ರೆ ನಡೆಯಿತು.**

**ಈ ವಾಕ್ಯದ ಭವಿಷ್ಯತ್ ಕಾಲದ ರೂಪ**

A) ನಮ್ಮ ಊರಿನಲ್ಲಿ ಜಾತ್ರೆ ನಡೆಯುತ್ತದೆ.
B) ನಮ್ಮ ಊರಿನಲ್ಲಿ ಜಾತ್ರೆ ನಡೆಯುವುದು.
C) ನಮ್ಮ ಊರಿನಲ್ಲಿ ಜಾತ್ರೆ ನಡೆದಿದೆ.
D) ನಮ್ಮ ಊರಿನಲ್ಲಿ ಜಾತ್ರೆ ನಡೆದಿಲ್ಲ.

ಉತ್ತರ : ☐ ____________________

10. **ಮಾದರಿಯಂತೆ ಬರೆ :**

**ಮಾದರಿ: ಕುಣಿವಳು ಈ ಪದದ ಧಾತು ರೂಪ : ಕುಣಿ**

**ಬಂದನು ಈ ಪದದ ಧಾತು ರೂಪ : ____________________**

A) ಬರು
B) ಬಂದ
C) ಬಂದೆ
D) ಬರುವನು

ಉತ್ತರ : ☐ ____________________

## II ಒಂದು ವಾಕ್ಯದಲ್ಲಿ ಉತ್ತರಿಸಿ.

11. **ಮಂತ್ರಿ, ಈ ಅಸಭ್ಯ ಪಕ್ಷಿಯನ್ನು ರಾಜಶಾಲೆಗೆ ಸೇರಿಸತಕ್ಕದ್ದು ರಾಜಾಧ್ಯಾಪಕರಿಂದ ಇದಕ್ಕೆ ಶಿಕ್ಷಣ ಕೊಡಿಸು.** **1 ಅಂಕ**

**ಮೇಲಿನ ಸಾಲುಗಳಲ್ಲಿ ಯಾವ ಪಕ್ಷಿಗೆ ಶಿಕ್ಷಣ ಕೊಡಿಸುವ ಬಗ್ಗೆ ಹೇಳಲಾಗಿದೆ.**

ಉತ್ತರ : ____________________________________________

12. **ತ್ರೇತಾಯುಗದಲ್ಲಿ ರಾಮನ್ನ ದ್ವಾಪರದ ಕೃಷ್ಣನ್ನ ಕಲಿಯುಗದ ಕಲ್ಕೀನ ಕಂಡಾನ.** **1 ಅಂಕ**

**ಮೇಲಿನ ಸಾಲುಗಳನ್ನು ಗಮನಿಸಿದಾಗ ತ್ರೇತಾಯುಗದಲ್ಲಿ ಜೀವಿಸಿದ್ದವರು.**

ಉತ್ತರ : ____________________________________________

13. 'ಹೀನ ಗುಣಗಳ ಹಿಂಗದೆ ಗಂಗೆಯ ಸ್ನಾನವ ಮಾಡಿರೇನು ಫಲ' ಎಂಬುದರ ಅರ್ಥವನ್ನು ಬರೆ. 1 ಅಂಕ

ಉತ್ತರ : ______________________________

14. ಯುದ್ಧದಿ ಆಂಗ್ಲರನೆದುರಿಸಿ ಗೆದ್ದಳು ಚನ್ನಮ್ಮನು ಕಿತ್ತೂರಿನಲಿ.

ಈ ಸಾಲಿನಲ್ಲಿ ಚೆನ್ನಮ್ಮ ಯುದ್ಧದಲ್ಲಿ ಎದುರಿಸಿದ್ದು ಯಾರನ್ನು? 1 ಅಂಕ

ಉತ್ತರ : ______________________________

## III ಎರಡು–ಮೂರು ಸಾಲಿನಲ್ಲಿ ಉತ್ತರಿಸಿ.

15. ನಾನು ದಾರಿಯಲ್ಲಿ ನಡೆದು ಹೋಗುತ್ತಿದ್ದೆ ನನ್ನ ಬೂಟುಗಳು ಇದ್ದಕ್ಕಿದ್ದಂತೆ ನಿಂತು ಹೋದವು. ಮೆಲ್ಲನೆ ಕೆಳಗೆ ನೋಡಿದರೆ... ಆಹಾ.... ಹುಂಚಿ ಹೂವು! ನೆಲದ ತುಂಬಾ ಹಳದಿಯ ಹುಂಚಿ ಹೂವುಗಳ ರಾಶಿರಾಶಿ.

ಮೇಲಿನ ಸಾಲುಗಳನ್ನು ಗಮನಿಸಿ ಲೇಖಕರ ಬೂಟುಗಳು ಇದ್ದಕ್ಕಿದ್ದಂತೆ ನಿಲ್ಲಲು ಕಾರಣ ತಿಳಿಸಿ. 2 ಅಂಕ

ಉತ್ತರ : ______________________________

______________________________

______________________________

______________________________

16. ಮಲ್ಲಜ್ಜಿಯ ಮಳಿಗೆಯ ಮುಂದಿರುವ ಚಪ್ಪಡಿ ಕಲ್ಲುಗಳೇ ಇಲ್ಲಿ ಕಟಕಟೆ, ಕೋರ್ಟು ಶುಲ್ಕ, ವಕೀಲರ ಫೀಜು ಯಾವುದು ಇಲ್ಲಿಲ್ಲ. ಮಲ್ಲಜ್ಜಿಯ ನೀಡುವ ತೀರ್ಪು ಯಾವ ನ್ಯಾಯಾಧೀಶರ ತೀರ್ಪಿಗೂ ಕಡಿಮೆ ಇಲ್ಲ. ಆದ್ದರಿಂದ ಮಲ್ಲಜ್ಜಿಯ ಮಳಿಗೆ ಒಂದು ಜನಪ್ರಿಯ 'ಜನತಾ ನ್ಯಾಯಾಲಯ' ಇದ್ದಂತೆ.

ಇಲ್ಲಿ 'ಮಲ್ಲಜ್ಜಿಯ ಜನತಾ ನ್ಯಾಯಾಲಯ'ವನ್ನು ನಿಮ್ಮದೇ ಮಾತುಗಳಲ್ಲಿ ವಿವರಿಸಿ. 2 ಅಂಕ

ಉತ್ತರ : ______________________________

______________________________

______________________________

______________________________

17. ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬೇವೂರ ಗ್ರಾಮದವರಾದ ಸರ್. ಗುರುನಾಥರಾವ್ ಹಾಗೂ ರುಕ್ಮಿಣಿ ಬಾಯಿರವರ ಪುತ್ರನೇ ಗೋಪಾಲರಾವ್ ಇವರು ದಿನಾಂಕ **11.08.1916**ರಂದು ಜನಿಸಿದರು.

ಮೇಲಿನ ಗದ್ಯ ಗಮನಿಸಿ ಗೋಪಾಲರಾವ್ ಎಲ್ಲಿ ಯಾವಾಗ ಜನಿಸಿದರು ಎಂಬುದನ್ನು ತಿಳಿಸಿ. **2 ಅಂಕ**

ಉತ್ತರ : ______________________________

______________________________

______________________________

______________________________

18. ಸಂಗೊಳ್ಳಿ ರಾಯಣ್ಣನು ಬ್ರಿಟಿಷರಿಗೆ ಸಿಂಹಸ್ವಪ್ನವಾಗಿದ್ದ. ಸೆರೆಹಿಡಿಯಲು ತಿಣುಕಾಡಿದರೂ ಚಳ್ಳೆಹಣ್ಣು ತಿನ್ನಿಸಿ ನುಣುಚಿಕೊಳ್ಳುವುದರಲ್ಲಿ ನಿಪುಣನಾಗಿದ್ದ.

ಈ ವಾಕ್ಯದಲ್ಲಿ 'ಚಳ್ಳೆಹಣ್ಣು ತಿನ್ನಿಸಿ' ಎಂಬುದರ ವಿಶೇಷವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **2 ಅಂಕ**

ಉತ್ತರ : ______________________________

______________________________

______________________________

______________________________

## IV ನಾಲ್ಕು–ಐದು ಸಾಲುಗಳಲ್ಲಿ ಉತ್ತರಿಸಿ.

19. ಹೂವುಗಳು ಎಂದರೆ ಎಲ್ಲರಿಗೂ ಇಷ್ಟ. ನೀನು ನೋಡಿರುವ ವಿವಿಧ ಹೂಗಳನ್ನು ಕುರಿತು ಐದು ಸಾಲುಗಳ ಕಿರು ಟಿಪ್ಪಣಿ ಬರೆ. **3 ಅಂಕ**

ಉತ್ತರ : ______________________________

______________________________

______________________________

______________________________

______________________________

______________________________

20. ಯಾವ ಕಾಡಲ್ಲಿ ಜೇನುಂಡು ಬೆಳೆದಿದ್ದ
ಜಾಂಬವಂತನ ಹಿಡಿದು ತಂದಾನ ?
'ಧಣಿಯರ ಮನಿಮುಂದ ಕಾವಲು ಮಾಡಣ್ಣ
ಧನಿ ದಾನ ಕೇಡುವನು ಅಂದಾನ
ಈ ಮೇಲಿನ ಪದ್ಯದ ಭಾವಾರ್ಥವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ. **3 ಅಂಕ**

ಉತ್ತರ : ________________________________

________________________________


________________________________

________________________________

________________________________

________________________________

21. ಕೆಳಗಿನ ಚಿತ್ರ ಗಮನಿಸಿ ಚಿತ್ರಕ್ಕೆ ಸಂಬಂಧಿಸಿದಂತೆ ಬೆಳಗಿನ ಜಾವವನ್ನು ಕುರಿತು ನಿಮ್ಮದೇ ಅನುಭವವನ್ನು ಎಂಟು ಸಾಲುಗಳಲ್ಲಿ ವರ್ಣಿಸಿ. **4 ಅಂಕ**



ಉತ್ತರ : ________________________________

________________________________

________________________________

________________________________

________________________________

________________________________

________________________________

________________________________


**22. ನಿಮ್ಮ ಶಾಲಾ ಪ್ರವಾಸಕ್ಕೆ 600ರೂ. ಹಣ ಕೋರಿ ನಿಮ್ಮ ತಂದೆಗೆ ಪತ್ರ ಬರೆಯಿರಿ.** **4 ಅಂಕ**

**ಅಥವಾ**

**ನಿಮ್ಮ ಊರಿನ ಜಾತ್ರೆಗೆ  ಆಹ್ವಾನಿಸಿ ನಿನ್ನ ಗೆಳೆಯನಿಗೆ ಪತ್ರ ಬರೆ**

23.

## ಕೃತಿಕಾರರ ಪರಿಚಯ



**ದ.ರಾ. ಬೇಂದ್ರೆ** : 'ಅಂಬಿಕಾತನಯದತ್ತ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಕ್ರಿ. ಶ. 1896 ರಲ್ಲಿ ಧಾರವಾಡದ ಸಾಧನಕೇರಿಯಲ್ಲಿ ಜನಿಸಿದರು. ಇವರು ಪ್ರೌಢಶಾಲಾ ಅಧ್ಯಾಪಕರಾಗಿ, ಸೊಲ್ಲಾಪುರದ ರಾಜಾರಾಮ್ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಧಾರವಾಡದ ಬಾನುಲಿ ಕೇಂದ್ರದ ಸಲಹೆಗಾರರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಕನ್ನಡ ನವೋದಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು ಗರಿ, ನಾಕುತಂತಿ, ನಾದಲೀಲೆ, ಮೇಘದೂತ, ಗಂಗಾವತರಣ, ಸಖೀಗೀತ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ ನಾಕುತಂತಿ ಕವನ ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿಯು ಲಭಿಸಿದೆ. ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೂ ಭಾಜನರಾಗಿದ್ದಾರೆ.

ಮೇಲಿನ ಗದ್ಯಭಾಗವನ್ನು ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ. **4 ಅಂಕ**

* ಬೇಂದ್ರೆಯವರು ಎಲ್ಲಿ ? ಯಾವಾಗ ಜನಿಸಿದರು ?
* ಬೇಂದ್ರೆಯವರಿಗೆ ದೊರೆತ ಪ್ರಶಸ್ತಿಗಳು ಯಾವುವು ?

ಉತ್ತರ : ____________________